# ಶ್ರೀಹರಿಯಲ್ಲಿ ನವವಿಧ ಭಕ್ತಿ - ೧

❖ ಲೇಖಿಕರು : ಶ್ರೀಮತಿ ಶಶಿಕಲಾ ಶ್ರೀಧರ್   ಚಿತ್ರಗಳು: ಶ್ರೀ ನರಸಿಂಹ ಹೆಗ್ಡೆ

ಭಾಗವತೋತ್ತಮನಾದ ಬಾಲಕ ಪ್ರಹ್ಲಾದನು ಶುಕ್ರಾಚಾರ್ಯರ ಪುತ್ರರಾದ ಶಂಡ ಮತ್ತು ಅಮರ್ಕರ ಬಳಿ ವಿದ್ಯಾಭ್ಯಾಸವನ್ನು ಮುಗಿಸಿ ಅರಮನೆಗೆ ಹಿಂದಿರುಗಿ ತನ್ನ ತಂದೆಯಾದ ಹಿರಣ್ಯಕಶಿಪುವಿನ ಬಳಿಗೆ ಬಂದು ಅವನ ಪಾದಗಳಿಗೆರಗಿದ. ಅವನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು "ಮಗು ಪ್ರಹ್ಲಾದ, ಚಿರಂಜೀವಿಯಾಗು. ಇಷ್ಟು ಕಾಲದವರೆಗೆ ನೀನು ಗುರುಕುಲದಲ್ಲಿ ಏನನ್ನು ಕಲಿತಿರುವೆಯೋ ಅವುಗಳಲ್ಲಿ ಉತ್ತಮವಾದ ಎರಡು ಮಾತುಗಳನ್ನು ಹೇಳು ನೋಡೋಣ" ಎಂದು ಕೇಳಿದಾಗ ಕುಮಾರ ಪ್ರಹ್ಲಾದ ನೀಡಿದ ಉತ್ತರ:

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ।
ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವ ಲಕ್ಷಣಾ
ಕ್ರಿಯತೇ ಭಗವತ್ಯದ್ಧಾ ತನ್ಮನ್ಯೇಽಧೀತಮುತ್ತಮಮ್ ॥

(ಭಾಗವತ, ೭.೫.೨೪)

"ತಂದೆಯೆ, ಭಗವಂತನಾದ ಶ್ರೀವಿಷ್ಣುವಿನ ಗುಣಗಳನ್ನು, ನಾಮಗಳನ್ನು ಕೇಳುವುದು, ಸಂಕೀರ್ತನೆ ಮಾಡುವುದು, ನಾಮರೂಪಾದಿಗಳನ್ನು ಸ್ಮರಣೆ ಮಾಡುವುದು, ಪಾದಸೇವೆ ಮಾಡುವುದು, ಅರ್ಚನೆ, ನಮಸ್ಕಾರ ಮಾಡುವುದು, ದಾಸನಾಗಿ ಕೈಂಕರ್ಯ ಮಾಡುವುದು, ಸ್ನೇಹಿತನಂತೆ ಪ್ರೀತಿಸುವುದು, ಕಡೆಯದಾಗಿ ಆತ್ಮವನ್ನೇ ಸಂಪೂರ್ಣವಾಗಿ ಭಗವಂತನಿಗೆ ಸಮರ್ಪಿಸುವುದು ಎಂಬೀ ಭಕ್ತಿಯ ಒಂಭತ್ತು ಬಗೆಗಳ ಮೂಲಕ ಭಗವಂತನಲ್ಲಿ ಭಕ್ತಿಭಾವವನ್ನು ಸಮರ್ಪಣೆ ಮಾಡುವುದು ಉತ್ತಮವಾದ ಅಧ್ಯಯನವೆಂದು ನಾನು ತಿಳಿಯುತ್ತೇನೆ" ಎನ್ನುತ್ತಾನೆ.

ಪ್ರಹ್ಲಾದ ತಿಳಿಸಿರುವ ಒಂಭತ್ತು ಬಗೆಯ ಭಕ್ತಿಯ ಲಕ್ಷಣಗಳನ್ನು ತಿಳಿಸುವ ಪ್ರಯತ್ನ ಈ ಲೇಖನ. ಪರಮಾತ್ಮನಲ್ಲಿ ಪರಿಪೂರ್ಣ ಅನುರಕ್ತಿಯೇ ಭಕ್ತಿ. ಈ ಭಕ್ತಿಯು ಹಲವು ಬಗೆಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಪರಮ ಭಾಗವತರಾದ ಶ್ರೀ ನಾರದ ಮಹರ್ಷಿಗಳು ತಮ್ಮ 'ಭಕ್ತಿಸೂತ್ರ'ಗಳಲ್ಲಿ ಹನ್ನೊಂದು ಬಗೆಯ ಭಕ್ತಿಯನ್ನು ಗುರುತಿಸುತ್ತಾರೆ. ಇವುಗಳ ಸ್ಥೂಲ ಪರಿಚಯ ಹೀಗಿದೆ:

೧.ಗುಣಮಾಹಾತ್ಮ್ಯಾಸಕ್ತಿ : ಭಗವಂತನ ಗುಣಗಳಲ್ಲಿ, ಮಹಿಮೆಯಲ್ಲಿ ಆಸಕ್ತನಾಗಿರುವುದು. ಭಕ್ತನು ಎಲ್ಲೆಲ್ಲೂ ಎಲ್ಲ ಸಮಯದಲ್ಲೂ ದೇವರ ಗುಣಮಹಿಮೆಗಳನ್ನು ಕೊಂಡಾಡುವುದರಲ್ಲೇ ಸಂತೋಷಿಸುತ್ತಾನೆ. ಅವನಿಗೆ ಉಳಿದ ಯಾವುದೇ ವಿಷಯಗಳಲ್ಲೂ ಆಸಕ್ತಿ ಇರುವುದಿಲ್ಲ. ಉದಾ: ವಾಲ್ಮೀಕಿ, ವ್ಯಾಸ, ಶುಕ.

೨.ರೂಪಾಸಕ್ತಿ: ಭಗವಂತನ ರೂಪದಲ್ಲಿ ಆಸಕ್ತಿಯನ್ನು ಹೊಂದಿರುವುದು. ಮನ್ಮಥನಿಗೇ ಮನ್ಮಥನಾದ ಆ ದಿವ್ಯ ಮಂಗಳ ವಿಗ್ರಹನಿಗೆ ಮನಸೋತು ಆ ಪರಮಾತ್ಮನ ಸುಂದರ ರೂಪವನ್ನು ಕಣ್ತುಂಬ ತುಂಬಿಕೊಂಡು ಹೃದಯದಲ್ಲಿ ಧ್ಯಾನಿಸುವುದೇ ರೂಪಾಸಕ್ತಿ. ಉದಾ: ದಂಡಕಾರಣ್ಯದ ಋಷಿಗಳು, ವೃಂದಾವನದ ಗೋಪಿಯರು.

೩.ಪೂಜಾಸಕ್ತಿ: ಆ ದೇವದೇವನ ದಿವ್ಯಮಂಗಳ ಅರ್ಚನೆ ಅಭಿಷೇಕವೇ ಮೊದಲಾದ ಷೋಡಶೋಪಚಾರ ಪೂಜೆಗಳನ್ನು ಸಲ್ಲಿಸುವುದು ಪೂಜಾಸಕ್ತಿ. ಇದು ಬಾಹ್ಯೋಪಕರಣಗಳೊಡನೆ ಪೂಜಾದ್ರವ್ಯಗಳೊಡನೆ ಮಾಡುವ ಬಾಹ್ಯಪೂಜೆಯೂ ಆಗಬಹುದು. ಈ ಯಾವ ಉಪಕರಣಗಳಿಲ್ಲದೆಯೇ ನಡೆಸುವ ಮಾನಸಪೂಜೆಯೂ ಆಗಬಹುದು. ಉದಾ: ಅಂಬರೀಷ.

೪.ಸ್ಮರಣಾಸಕ್ತಿ: ಭಗವನ್ನಾಮಸ್ಮರಣೆಯೊಂದೇ ಬಾಳಿನ ಸರ್ವಸ್ವವಾಗಿ ಭಗವಂತನ ಆ ಪುಣ್ಯ ಸ್ಮರಣೆಯಲ್ಲಿಯೇ ಸದಾ ಇರಲು ಬಯಸುವವರೇ ಸ್ಮರಣಾಸಕ್ತಿಯ ಭಕ್ತರು. ಉದಾ: ಪ್ರಹ್ಲಾದ, ನಾರದ.

೫.ದಾಸ್ಯಾಸಕ್ತಿ: ಭಗವಂತ ಒಡೆಯ, ನಾನು ಆತನ ದಾಸ ಎಂಬ ಭಾವವನ್ನು ಹೊಂದಿರುವವರು. ಒಡೆಯನ ಅಪ್ಪಣೆಯಂತೆಯೇ ನಡೆಯುವುದು ದಾಸನ ಕರ್ತವ್ಯ. ದಾಸನಿಗೆ ತನ್ನತನವೆಂಬುದಿಲ್ಲ. ಒಡೆಯನ ಸೇವೆಯೇ ಅವನ ಜೀವನದ ಸರ್ವಸ್ವ. ಉದಾ: ಹನುಮಂತ.

೬.ಸಖ್ಯಾಸಕ್ತಿ: ಪರಮಾತ್ಮನನ್ನು ತನ್ನ ಪರಮಮಿತ್ರನೆಂದು ಭಾವಿಸುತ್ತಾ, ಅವನ ಸರಿಸಮಾನನಂತೆ ನಡೆದುಕೊಂಡು, ಗೆಳೆಯನಿಂದ ಅಪೇಕ್ಷಿಸುವುದನ್ನೆಲ್ಲಾ ಅವನಿಂದ ಅಪೇಕ್ಷಿಸಿ, ಅತ್ಯಂತ ಸಲಿಗೆ ಪ್ರೀತಿಗಳಿಂದ ಅವನನ್ನು ಕಾಣುವುದು. ಉದಾ: ಅರ್ಜುನ.

೭.ವಾತ್ಸಲ್ಯಾಸಕ್ತಿ: ಪರಮಾತ್ಮ ನನ್ನ ಕಂದ, ತಾನು ಅವನ



ಭಕ್ತಿಯ ಪಥದಲ್ಲಿ ಭಗವಂತನನ್ನು ಆರಾಧಿಸುವ ಸಾಧಕನು ಆರಾಧ್ಯ-ದೈವದೊಂದಿಗೆ ಸಂಬಂಧವನ್ನು ಕಲ್ಪಿಸಿಕೊಂಡು ಚಿತ್ತಶುದ್ಧಿ, ಭಾವಶುದ್ಧಿಗಳನ್ನು ಸಾಧಿಸುತ್ತಾನೆ. ಇದನ್ನು ಲೇಖಕಿ ಉದಾಹರಣೆಗಳ ಮೂಲಕ ಸರಳವಾಗಿ ವಿವರಿಸಿದ್ದಾರೆ.

ತಾಯಿ ಎಂಬುದಾಗಿ ತನ್ನಲ್ಲಿ ತಾಯ್ತನವನ್ನು ಆರೋಪಿಸಿ ಕೊಂಡು ಪರಮ ವಾತ್ಸಲ್ಯದಿಂದ ಭಕ್ತನು ಭಗವಂತನನ್ನು ಕಾಣುತ್ತಾನೆ. ಸರ್ವಶಕ್ತನಾದ ದೇವನು ಭಕ್ತನೆದುರು ಪುಟ್ಟ ಕಂದನಾಗಿ ನಿಂತು ಅವನ ಭಕ್ತಿಭರಿತ ವಾತ್ಸಲ್ಯವನ್ನು ಆಸ್ವಾದಿಸುತ್ತಾನೆ. ಉದಾ: ಕೌಸಲ್ಯಾ, ಯಶೋದಾ.

೮.ಕಾಂತಾಸಕ್ತಿ: ದೇವರನ್ನು ತನ್ನ ಪ್ರಿಯತಮನೆಂದು ಮಧುರ ಭಾವದಿಂದ ಕಾಣುವುದೇ ಕಾಂತಾಸಕ್ತಿ ಎಂಬ ಭಕ್ತಿರೂಪ. ಇಲ್ಲಿ ಜೀವ-ಈಶ್ವರ ಸಂಬಂಧ ಪತಿಪತ್ನಿಯ ಸಂಬಂಧ ವನ್ನು ಹೋಲುತ್ತದೆ. ಪರಮಾತ್ಮನೇ ಪತಿ, ಭಕ್ತನೇ ಸತಿ. ಈ ಸತಿಯ ಭಾವ ಹೊಂದಿರುವ ಭಕ್ತ ತನ್ನ ಪತಿಯಲ್ಲಿ ಸರ್ವಸ್ವವನ್ನೂ ಒಪ್ಪಿಸಿಕೊಳ್ಳುತ್ತಾನೆ. ದೇವನೊಬ್ಬನೇ ಪರಮ ಪುರುಷ; ಉಳಿದೆಲ್ಲ ಜೀವಿಗಳು ಸ್ತ್ರೀಯರು. ಉದಾ. ರಾಧಾ, ಮೀರಾಬಾಯಿ.

೯.ಆತ್ಮನಿವೇದನಾಸಕ್ತಿ: ಭಕ್ತನಾದವನು ತನ್ನದಾದ ಎಲ್ಲವನ್ನೂ ಪರಮಾತ್ಮನಿಗೆ ಸಮರ್ಪಿಸಿ ಶರಣಾಗುತ್ತಾನೆ. ಇದೇ ಆತ್ಮ ಸಮರ್ಪಣೆ. ಇಲ್ಲಿ ತನ್ನ ಅಲ್ಪತ್ವ, ಅಶಕ್ತತೆಗಳ ಅರಿವು ಅವನಿಗೆ ಇರುತ್ತದೆ. ಉದಾ: ವಿಭೀಷಣ, ಬಲಿಚಕ್ರವರ್ತಿ.

೧೦.ತನ್ಮಯತಾಸಕ್ತಿ: ಸದಾಕಾಲ ತಪೋನಿರತರಾಗಿ ಭಗವಂತ ನಲ್ಲಿ ತನ್ಮಯತೆಯನ್ನು ಸಾಧಿಸುವ ಭಕ್ತರು ತನ್ಮಯಾಸಕ್ತರು. ಉದಾ: ಸನತ್ಕುಮಾರಾದಿ ಋಷಿಗಳು.

೧೧. **ಪರಮವಿರಹಾಸಕ್ತಿ**: ಸದಾಕಾಲ ಭಗವಂತನ ಸಾನ್ನಿಧ್ಯ ವನ್ನು ಬಯಸಿ, ಒಂದು ಕ್ಷಣವೂ ಅವನಿಂದ ದೂರ ವಿರಲಾಗದ ಸ್ಥಿತಿಯಿದು. ದೂರವಿರುವ ಪರಮಾತ್ಮನನ್ನು ಸೇರಬೇಕೆಂಬ ವಿರಹದಿಂದ ಭಕ್ತ ಪರಿತಪಿಸುತ್ತಾನೆ. ಅವನನ್ನು ಕಾಣಬೇಕು, ಅವನೊಂದಿಗೆ ಮಾತನಾಡಬೇಕು, ಅವನನ್ನು ಕುರಿತು ಹಾಡಿ ಸೇವಿಸಬೇಕು ಎಂದು ಹಂಬಲಿಸುವ ಇಂತಹ ಭಕ್ತರು ಪರಮವಿರಹಾಸಕ್ತರು. ಉದಾ: ಗೋಪಿಯರು.

ಈ ಮೇಲ್ಕಂಡ ಹನ್ನೊಂದು ವಿಧದ ಭಕ್ತಿಯು ಭಾಗವತ ದಲ್ಲಿ ಬರುವ ನವವಿಧ ಭಕ್ತಿಯಲ್ಲಿ ಸಂಗ್ರಹರೂಪವಾಗಿ ಅಡಗಿದೆ. ಭಕ್ತನಾದವನು 'ಶ್ರವಣ' - ಕೇಳುವುದರಿಂದ ಆರಂಭಿಸಿ, ತನಗರಿವಿಲ್ಲದಂತೆಯೇ ಭಗವಂತನ 'ಕೀರ್ತನೆ' ಮಾಡುತ್ತ ಅನವರತ ಅವನ 'ಸ್ಮರಣೆ'ಯಲ್ಲಿಯೇ ಇರಲು ಇಚ್ಛಿಸುತ್ತಾನೆ. ಅನಂತರ ಆ ಭಗವಂತನಲ್ಲಿ ಅನುರಾಗ ಹೆಚ್ಚುತ್ತಾ ಹೋದಂತೆಯೇ ಅವನ 'ಪಾದಸೇವೆ' ಮಾಡುತ್ತ ಅವನನ್ನು 'ಅರ್ಚಿಸಿ' ಆರಾಧಿಸುತ್ತ ಕಡೆಯಲ್ಲಿ ಅವನನ್ನು 'ವಂದಿಸಿ' ಆತನ 'ದಾಸ'ನಾಗಿಯೇ ಉಳಿಯುತ್ತಾನೆ. ಭಕ್ತಿ ಪಕ್ವವಾಗುತ್ತಿದ್ದಂತೆಯೇ ಪರಮಾತ್ಮನೇ ಪರಮ 'ಸಖ' ನಾಗುತ್ತಾನೆ. ಅವನ ಸರ್ವಶಕ್ತಿಯ ಅರಿವು ಮೂಡಿ ತನ್ನತನ ವನ್ನು ಕಳೆದುಕೊಂಡ ಭಕ್ತ ಕಟ್ಟಕಡೆಗೆ ತನ್ನನ್ನೇ ಸಂಪೂರ್ಣ ವಾಗಿ 'ನಿವೇದಿಸಿ'ಕೊಳ್ಳುತ್ತಾನೆ. ಹೀಗೆ ನಮ್ಮ ಎಲ್ಲಾ ದೇವತಾ ಕೈಂಕರ್ಯಗಳಲ್ಲಿ ಭಕ್ತಿಯ ಒಂಭತ್ತು ಅಂಗಗಳೂ ಓತಪ್ರೋತ ವಾಗಿವೆ, ಒಂದಕ್ಕೊಂದು ಪೂರಕವಾಗಿವೆ.

**ಒಂಭತ್ತು ಭಕ್ತಿರೂಪಗಳಿಗೆ ಒಂಭತ್ತು ಭಾಗವತರು**

ಶ್ರೀಸದಾಶಿವಬ್ರಹ್ಮೇಂದ್ರರು ನವವಿಧಭಕ್ತಿಯೇ ಭಗವಂತನ ಸಾಕ್ಷಾತ್ಕರಕ್ಕೂ ಮುಕ್ತಿಗೂ ಸುಲಭೋಪಾಯ ಎನ್ನುತ್ತಾರೆ. ಈ ನವವಿಧ ಭಕ್ತಿಯನ್ನು ಆಚರಿಸಿ ಮೋಕ್ಷವನ್ನು ಪಡೆದಿರು ವವರು ಅನೇಕ ಮಹನೀಯರಾದರೂ, ನಮ್ಮ ಪುರಾಣಗಳಲ್ಲಿ ವಿಶೇಷವಾಗಿ ಕಂಡುಬರುವ ಉದಾಹರಣೆಗಳು ಈ ರೀತಿ ಇವೆ.

**ಶ್ರೀಕೃಷ್ಣಶ್ರವಣೇ ಪರೀಕ್ಷಿದಭವತ್ ವೈಯಾಸಕಿಃ ಕೀರ್ತನೇ**
**ಪ್ರಹ್ಲಾದಃ ಸ್ಮರಣೇ ತದಂಘ್ರಿಭಜನೇ ಲಕ್ಷ್ಮೀಃ ಪೃಥುಃ ಪೂಜನೇ।**
**ಅಕ್ರೂರಸ್ತ್ವಭಿವಂದನೇ ಕಪಿಪತಿರ್ದಾಸ್ಯೇ ಚ ಸಖ್ಯೇಽರ್ಜುನಃ**
**ಸರ್ವಸ್ವಾತ್ಮನಿವೇದನೇ ಬಲಿರಭೂತ್**
**ಕೈವಲ್ಯಮೇಷಾಂ ಸಮಮ್॥**

ಶ್ರೀಕೃಷ್ಣನ ಲೀಲಾವಿಶೇಷಗಳಿಂದ ಕೂಡಿದ ಭಾಗವತ ಪುರಾಣವನ್ನು ಕೇವಲ ಏಳುದಿನಗಳಲ್ಲಿ ಏಕನಿಷ್ಠೆಯಿಂದ ಶ್ರವಣ ಮಾಡಿ ಪರೀಕ್ಷಿತ್ ಮಹಾರಾಜನು ಮುಕ್ತಿಯನ್ನು ಪಡೆ ದನು. ಶ್ರೀಕೃಷ್ಣನ ಭಾಗವತವನ್ನು ಅಪಾರ ನಿಷ್ಠೆಯಿಂದ ಸಂಕೀರ್ತನೆ ಗೈದು ಶುಕಮಹರ್ಷಿಗಳು ಮೋಕ್ಷ ವನ್ನು ಪಡೆದರು. ಸತತವಾದ ಹರಿಸ್ಮರಣೆಯಿಂದ ಭಕ್ತ ಪ್ರಹ್ಲಾದನು ಭಗವತ್ಕೃಪೆ ಪಡೆದನು. ಸದಾ ಶ್ರೀಮನ್ನಾರಾಯಣನ ಪಾದಸೇವೆ ಮಾಡುತ್ತಿರುವ ಮಹಾಲಕ್ಷ್ಮಿ ಧನ್ಯಳೂ ಮಾನ್ಯಳೂ ಆದಳು. ಷೋಡಶೋಪಚಾರ ಪೂಜಾದಿಗಳಿಂದಲೂ, ಯಜ್ಞಯಾಗಾದಿಗಳಿಂದಲೂ ಪರಮಾತ್ಮನನ್ನು ಅರ್ಚಿಸಿ, ಒಲಿಸಿಕೊಂಡವರಲ್ಲಿ ಪೃಥು ಮಹಾರಾಜನು ಶ್ರೇಷ್ಠನೆನಿಸಿ ಕೊಂಡನು. ಹೃದಯಪೂರ್ವಕವಾಗಿ ನಮಸ್ಕಾರ ಮಾಡಿ ಭಗವತ್ಪ್ರೇಮವನ್ನು ಪಡೆದವನು ಅಕ್ರೂರ. ಇಂದ್ರಿಯಗಳ ಗುಲಾಮನಾಗದೆ ಶ್ರೀರಾಮನ ಸೇವಕನಾದ ಹನುಮನು ದಾಸ್ಯಭಕ್ತಿಯ ಪಾವಿತ್ರ್ಯವನ್ನು ಎತ್ತಿತೋರಿದನು. ಪರಮ ಸ್ನೇಹದಿಂದ ತನ್ನನ್ನು ಒಲಿಸಿಕೊಂಡ ಅರ್ಜುನನ ಭಕ್ತಿಗೆ ಕಟ್ಟುಬಿದ್ದ ಪರಮಾತ್ಮನು ಭಾರತಯುದ್ಧದಲ್ಲಿ ಪಾರ್ಥನಿಗೆ ಸಾರಥಿಯಾಗಿ ವೇದೋಪನಿಷತ್ತುಗಳ ಮಹಾತತ್ತ್ವಗಳನ್ನು ಗೀತೆಯ ಮೂಲಕ ಬೋಧಿಸಿ ಅನುಗ್ರಹಿಸಿದ. ವಾಮನರೂಪೀ ವಿಷ್ಣುವಿಗೆ ತನ್ನ ಸರ್ವಸ್ವವನ್ನು ಸಮರ್ಪಣೆ ಮಾಡಿಕೊಂಡ ಬಲಿಚಕ್ರವರ್ತಿ. ಹೀಗೆ ಈ ಒಂಭತ್ತು ಬಗೆಯ ಭಕ್ತಿರೂಪಗಳಿಗೆ

ಈ ಒಂಭತ್ತು ಪರಮಭಾಗವತರು ಅದ್ಭುತ ನಿದರ್ಶನವಾಗಿದ್ದಾರೆ.

ಈ ಒಂಭತ್ತು ಬಗೆಯ ಭಕ್ತಿರೂಪಗಳಿಂದ ಪ್ರೇರಿತರಾಗಿ, ಅವುಗಳನ್ನು ತಮ್ಮ ನಿಜಜೀವನದಲ್ಲಿ ಸಾಧಿಸಿ ತೋರಿಸಿ, ಅವು ತಮ್ಮ ಕೃತಿಗಳಲ್ಲೂ ಸುಂದರವಾಗಿ ಮೂಡಿಬರುವಂತೆ ಮಾಡಿರುವವರು ಜ್ಞಾನ, ಭಕ್ತಿ, ಯೋಗಗಳಲ್ಲಿ ಅಗ್ರಗಣ್ಯರಾದ ಸದಾಶಿವ ಬ್ರಹ್ಮೇಂದ್ರರು, ಸಮರ್ಥ ರಾಮದಾಸರು ಹಾಗೂ ಗಾನಯೋಗಿ ತ್ಯಾಗರಾಜ ಸ್ವಾಮಿಗಳು. ಅವರ ಕೃತಿಗಳಲ್ಲಿ ನವವಿಧ ಭಕ್ತಿ ಹೇಗೆ ಅಭಿವ್ಯಕ್ತವಾಗಿವೆ ಎಂಬುದನ್ನು ತಿಳಿಸಲು ಪ್ರಯತ್ನಿಸಿದ್ದೇನೆ.

೧ ಶ್ರವಣಭಕ್ತಿ :



ಜೀವ, ಈಶ್ವರ ಮತ್ತು ಈ ಜಗತ್ತು—ಇವುಗಳಿಗಿರುವ ಪರಸ್ಪರ ಸಂಬಂಧ ಹಾಗೂ ಭಗವಂತನ ಲೀಲೆಗಳನ್ನು ಕುರಿತು ಕೇಳಿ ಆಸ್ವಾದನೆ ಮಾಡುವುದು ಶ್ರವಣಭಕ್ತಿಯ ಲಕ್ಷಣ. ಸಜ್ಜನರ ಸಂಗ, ಉಪನ್ಯಾಸಗಳು, ಪುರಾಣ ಪುಣ್ಯಕಥೆಗಳ ಶ್ರವಣ, ಸಾಧುಸಂತರ ಸಂದರ್ಶನ ಇವೇ ಮುಂತಾದ ಪ್ರತ್ಯಕ್ಷವಾದ ಸತ್ಸಂಗದ ಮೂಲಕ ಶ್ರವಣಭಕ್ತಿ ಲಭ್ಯವಾಗುತ್ತದೆ. ಸಂತರ ಚರಿತ್ರೆಯ ಪಠನ, ರಾಮಾಯಣ, ಭಾರತ, ಭಾಗವತಗಳೇ ಮುಂತಾದ ಗ್ರಂಥಗಳ ಪಾರಾಯಣ—ಇವು ಭಗವತ್ಸಾನ್ನಿಧ್ಯವನ್ನು ಉಂಟುಮಾಡಿ ಏಕಾಂಗಿಯಾಗಿರುವಾಗಲೂ ಶ್ರವಣಭಕ್ತಿಯನ್ನು ದಯಪಾಲಿಸುವುವು ಎಂದು ಸದಾಶಿವ ಬ್ರಹ್ಮೇಂದ್ರರು ಹೇಳುತ್ತಾರೆ.

**ಸಾವಧ ಹೋಲೂ ನ ಬೈಸಾವೇ ಚಿತ್ತ ಸುಚೇತ ಕರಾವೇ** ಎಂಬ ರಚನೆಯಲ್ಲಿ ಸಮರ್ಥ ರಾಮದಾಸರು ಹೇಳುತ್ತಾರೆ: ಮೊದಲು ಸಾವಧಾನವಾಗಿ ಕುಳಿತು ಮನಸ್ಸನ್ನು ಏಕಾಗ್ರಗೊಳಿಸಿ ಪರಮಾರ್ಥದ ಪ್ರಾಪ್ತಿಗೆ ಇರುವ ಸಾಧನಗಳನ್ನು ಕೇಳಿದಾಗ ಅದರಿಂದ ಸಮಾಧಾನ ದೊರೆಯುವುದು ನಿಶ್ಚಿತ. ಶ್ರವಣದಿಂದ ಚಿತ್ತಶುದ್ಧಿ ಉಂಟಾಗಿ, ಭಕ್ತಿಯು ಹುಟ್ಟಿ, ವಿಷಯಗಳ ಬಗ್ಗೆ ವಿರಕ್ತಿಯುಂಟಾಗುವುದು. ಎಲ್ಲ ಸಂಶಯಗಳೂ ನಿವಾರಣೆಯಾಗಿ, ಪ್ರಜ್ಞೆ ಹಾಗೂ ಬುದ್ಧಿ ಬೆಳೆಯುವುದು. ಇಂತಹ ಬೋಧವು ಮೈಗೂಡಿತೆಂದರೆ ಸಾಧಕ ಸಿದ್ಧನಾಗುತ್ತಾನೆ. ಆದ್ದರಿಂದ ಅದ್ವೈತ ಗ್ರಂಥಗಳಲ್ಲಿರುವ ಆತ್ಮವಿದ್ಯೆಯ ಪರಮಾರ್ಥವಾದ ಸತ್ಯವಸ್ತುವನ್ನು ತಿಳಿಯಲು ಮೊದಲು ಶರೀರವನ್ನೇ ಕಿವಿಮಾಡಿಕೊಂಡು ಶ್ರವಣಜ್ಞಾನ ಪಡೆಯಬೇಕು ಎಂದು ಹೇಳಿದೆ. ಶ್ರವಣದಿಂದ ಪಡೆದುದನ್ನು ಮನನ ಮಾಡಿ ಅದರಲ್ಲಿಯ ಸಾರವನ್ನು ಶೋಧಿಸಿ ಗ್ರಹಣ ಮಾಡಬೇಕು. ಹಾಗಿಲ್ಲದಿದ್ದರೆ ಅವನು ಮಾನವ ವೇಷವುಳ್ಳ ಜಡವಸ್ತುವೇ ಸರಿ.

ಇದೇ ಶ್ರವಣಭಕ್ತಿಯ ನಿರೂಪಣೆಯನ್ನು ನಾದಯೋಗಿ ತ್ಯಾಗರಾಜರು ತಮ್ಮ ಕೀರ್ತನೆಗಳಲ್ಲಿ ಮೂಡಿಸಿದ್ದಾರೆ. ಭಕ್ತಿಯ ಈ ಒಂಭತ್ತು ವಿಧಗಳನ್ನು ತಾವು ಅನುಭವಿಸಿ ಅವುಗಳನ್ನು ತಮ್ಮ ಕೀರ್ತನೆಗಳಲ್ಲಿ ಸುಂದರವಾಗಿ ಅಳವಡಿಸಿ ಹಾಡಿದ್ದಾರೆ. ಮಧ್ಯಮಾವತಿ ರಾಗದ **'ರಾಮಕಥಾಸುಧಾರಸ'** ಕೃತಿಯಲ್ಲಿ ತ್ಯಾಗರಾಜರು ರಾಮಕಥಾಮೃತಪಾನವು ದೊಡ್ಡ ಸಾಮ್ರಾಜ್ಯವನ್ನೇ ಕೊಡುತ್ತದೆ; ಸ್ಥಿರತೆ, ಸಂತೋಷ, ಸುಖಗಳ ನಿಕೇತನವಾದ ಈ ಶ್ರವಣಾಮೃತದಿಂದ ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳೂ ಪ್ರಾಪ್ತವಾಗುತ್ತವೆ ಮಾತ್ರವಲ್ಲ, ಸಕಲ ದೋಷಗಳೂ ನಿವಾರಣೆಯಾಗಿ, ಮೋಕ್ಷ ಸಾಮ್ರಾಜ್ಯವನ್ನೇ ಕರುಣಿಸುತ್ತದೆ; ರಾಮಕಥಾಶ್ರವಣದಿಂದ ಅವನ ದಿವ್ಯರೂಪವು ಹೃದಯದಲ್ಲಿ ನಿಂತು ಧ್ಯಾನಾನಂದವನ್ನು ಕರುಣಿಸುತ್ತದೆ ಎನ್ನುತ್ತಾರೆ.

ಗರ್ಗಮುನಿಗಳು ಶ್ರವಣಭಕ್ತಿಯ ಬಗ್ಗೆ ಹೇಳುತ್ತಾ 'ಭಗವಂತನ ಮಹಿಮೆಗಳನ್ನು, ಗುಣಗಳನ್ನು, ನಾಮಗಳನ್ನು ಕೇಳುವುದು ಪ್ರಪ್ರಥಮ ಸೋಪಾನ. ಭಕ್ತಿ ಎಂದರೆ ಭಗವಂತನ ಕಥಾಶ್ರವಣದಲ್ಲಿ ಒಲವು; ಭಗವಂತನ ಕಥಾಶ್ರವಣವನ್ನು ಮತ್ತೆ ಮತ್ತೆ ಮಾಡುತ್ತಾ ಹೋಗುವುದರಿಂದ ಪ್ರಾಪಂಚಿಕ ಬಂಧನಗಳೆಲ್ಲವೂ ನಿಧಾನವಾಗಿ ಕಳಚಿಕೊಂಡು ಅಧ್ಯಾತ್ಮದ ಆಸಕ್ತಿ ಹೆಚ್ಚಾಗಿ ಭಗವಂತನ ಹೊರತು ಬೇರಾವುದೂ ರುಚಿಸದಂತಾಗುವುದು" ಎಂದು ಹೇಳುತ್ತಾರೆ. ತುಲಸೀದಾಸರು ತಮ್ಮ 'ರಾಮಚರಿತಮಾನಸ'ದಲ್ಲಿ ಹೇಳುತ್ತಾರೆ:

ಭಗತಭೂಮಿ ಭೂಸುರ ಸುರಭಿ ಸುರ ಹಿತ ಲಾಗಿ ಕೃಪಾಲ ।
ಕರತ ಚರಿತಧರಿ ಮನುಜತನು ಸುನಿತ ಮಿಟಹಿ ಜಗಜಾಲ ॥

"ಭಕ್ತರ ಅಭೀಷ್ಟವನ್ನು ಸಲ್ಲಿಸಲು, ಭೂಮಿಯ ಭಾರವನ್ನು ಇಳಿಸಲು, ಬ್ರಾಹ್ಮಣರು ಯಜ್ಞಯಾಗಾದಿಗಳನ್ನು ಸಾಧಿಸಲು ಅಡ್ಡಿಯಾಗದ ವಾತಾವರಣವನ್ನು ನಿರ್ಮಿಸಲು, ಗೋವುಗಳನ್ನು ಸಂರಕ್ಷಿಸಲು, ದೇವತೆಗಳಿಗೆ ಅವರವರ ಸ್ಥಾನಮಾನಗಳನ್ನು

ದೊರಕಿಸಿಕೊಡಲು, ಕೃಪಾಳು ಶ್ರೀರಾಮನು ಮಾನವ ದೇಹವನ್ನು ಧರಿಸಿ ನಾನಾಬಗೆಯ ಲೀಲೆಗಳನ್ನು ಮಾಡುತ್ತಾನೆ. ಅದನ್ನು ಕೇಳಿದ ಮಾತ್ರದಿಂದಲೇ ಈ ಜಗತ್ತಿನ ಬಂಧನವು ಕಡಿದುಹೋಗುತ್ತದೆ" ಎನ್ನುತ್ತಾರೆ.

೨. ಕೀರ್ತನ ಭಕ್ತಿ:



'ಭಗವಂತನ ನಾಮೋಚ್ಚಾರಣೆ, ಭಗವಂತನನ್ನು ಕುರಿತು ಸ್ತೋತ್ರಪಠನ, ಭಗವನ್ಮಹಿಮೆಗಳ ಗಾನ ಪ್ರವಚನ, ವೇದ ಮಂತ್ರಗಳಲ್ಲಿನ ಭಗವಂತನ ಸ್ತುತಿ—ಇವು ಕೀರ್ತನಭಕ್ತಿ ಎನಿಸುವುವು. ಭಗವಂತನ ಸಾಮೀಪ್ಯವನ್ನು ಪಡೆಯಲು ಇದು ಅತ್ಯಂತ ಸರಳವಾದ ಮಾರ್ಗ. ಕೀರ್ತನಭಕ್ತಿಯಿಂದ ಸಾಮಾನ್ಯ ಜನರೂ ಹೆಚ್ಚಿನ ಲಾಭವನ್ನು ಪಡೆಯುವರು" ಎಂದು ಹೇಳುತ್ತಾರೆ ಸದಾಶಿವಬ್ರಹ್ಮೇಂದ್ರರು.

ಸಮರ್ಥ ರಾಮದಾಸರು ಹೇಳುತ್ತಾರೆ, **ಮನ ಠೇವೂನ ಈಶ್ವರೀ ಜೋ ಕೋಣೀ ಹರಿಕಥಾ ಕರೀ। ತೋಚೀ ಯೇ ಸಂಸಾರೀ ಧನ್ಯ ಜಾಲಾ ॥** "ಈಶ್ವರನಲ್ಲಿ ಮನಸ್ಸನ್ನು ಇಟ್ಟು ಕೀರ್ತನ ಮಾಡುವವನೇ ಈ ಜಗದಲ್ಲಿ ಧನ್ಯನು. ದೇವನ ಗುಣವರ್ಣನೆಯನ್ನು ವಿಶ್ವದಲ್ಲೆಲ್ಲಾ ತುಂಬಿ ಅದರಾಚೆಗೂ ಬಿತ್ತರಿಸುವಂತೆ ಕೀರ್ತನೆ ಮಾಡಬೇಕು. ಇಂತಹ ಕೀರ್ತನೆಯನ್ನು ಕೇಳುವವರಲ್ಲಿ ವಿವೇಕವು ಜಾಗೃತವಾಗಿ ಅವರು ಕೂಡಲೇ ಸನ್ಮಾರ್ಗಕ್ಕೆ ಹತ್ತುವಂತಿರಬೇಕು. ಕಾರಣ ಕಲಿಯುಗದಲ್ಲಿ ಕೀರ್ತನವು ತಾರಕಮಂತ್ರವಾಗಿದೆ." ಪರಮಾತ್ಮನ ಮಹಿಮೆಗಳನ್ನು ಅತ್ಯಂತ ಪ್ರೀತಿಯಿಂದ ವರ್ಣಿಸಬೇಕು. ಕಂಪನ, ರೋಮಾಂಚನ, ಅಶ್ರುಪಾತ ಮೊದಲಾದ ಸಾತ್ತ್ವಿಕ ಭಾವಗಳೊಂದಿಗೆ ಗಾಯನ ಮಾಡಬೇಕು. **"ಕೀರ್ತನೇ ಸಂತೋಷೇ ಪರಮಾತ್ಮಾ, ಸಕಳ ತೀರ್ಥೇ ಅಣಿ ಜಗದಾತ್ಮಾ ಕೀರ್ತನಿ ವಸೇ"**—ಕೀರ್ತನದಿಂದ ಪರಮಾತ್ಮ ಸಂತುಷ್ಟನಾಗುತ್ತಾನೆ. ಸಂಕೀರ್ತನ ನಡೆಯುವ ಸ್ಥಳದಲ್ಲಿ ಸಕಲ ತೀರ್ಥಗಳೂ ಇವೆ, ಸ್ವತಃ ಪರಮಾತ್ಮನೇ ಇರುತ್ತಾನೆ. ಪರಮಾತ್ಮ ಹೇಳುತ್ತಾನೆ: **ನಾಹೀ ವೈಕುಂಠೀ ಚಾ ಠಾಈ ನಾಹಿ ಯೋಗಿಯಾಂಚಾ ಹೃದೀ। ಮಾಝೇ ಭಕ್ತ ಗಾತೀ ಠಾಈ ಠಾಈ ತೇಥೇ ಮಿ ತಿಷ್ಠತು ನಾರದಾ ॥** "ನಾರದನೇ, ನಾನು ವೈಕುಂಠದಲ್ಲೂ ಇಲ್ಲ, ಯೋಗಿಗಳ ಹೃದಯದಲ್ಲೂ ಇಲ್ಲ. ಎಲ್ಲಿ ನನ್ನ ಭಕ್ತರು ನಾಮಸಂಕೀರ್ತನೆಯನ್ನು ಮಾಡುತ್ತಿರುವರೋ ಅಲ್ಲಿ ನಾನು ನಿಂತಿರುತ್ತೇನೆ." ಕೃತಯುಗದಲ್ಲಿ ಧ್ಯಾನದಿಂದಲೂ, ದ್ವಾಪರದಲ್ಲಿ ಅರ್ಚನೆಯಿಂದಲೂ, ತ್ರೇತಾಯುಗದಲ್ಲಿ ಯಜ್ಞಯಾಗಗಳಿಂದಲೂ ಯಾವ ಫಲವನ್ನು ಪಡೆಯುತ್ತಿದ್ದರೋ ಆ ಫಲವನ್ನು ಕಲಿಯುಗದಲ್ಲಿ ಕೇಶವನ ನಾಮಸಂಕೀರ್ತನೆ ಮಾಡುವುದರಿಂದಲೇ ಪಡೆಯುತ್ತಾರೆ ಎಂದು ವಿಷ್ಣುಪುರಾಣದಲ್ಲಿ ಹೇಳಿದೆ. ಸಂತ ತ್ಯಾಗರಾಜರು, ಕೀರ್ತನೆ ಕೇವಲ ಬಾಹ್ಯಾಡಂಬರವಾಗಿರದೆ ಭಗವಂತನ ರೂಪಗುಣಮಹಿಮೆಗಳನ್ನು ಪ್ರಶಂಸಿಸುವ ಸಂಕೀರ್ತನೆಯಾಗಬೇಕು ಎನ್ನುತ್ತಾರೆ. ವಾಸ್ತವವಾಗಿ ತ್ಯಾಗರಾಜರೇ ಕೀರ್ತನಭಕ್ತಿಗೊಂದು ಜೀವಂತ ಉದಾಹರಣೆ. ಸಂಗೀತಭರಿತವಾದ ಸಂಕೀರ್ತನೆ ಅತ್ಯಂತ ವಿಶಿಷ್ಟವಾದುದು. ಗಾನಲೋಲ ಭಗವಂತನನ್ನು ಒಲಿಸಿಕೊಳ್ಳಲು ಇದು ಕಲಿಯುಗದಲ್ಲಿ ಸರಳೋಪಾಯ. ಇಂತಹ ಸಂಕೀರ್ತನೆಯನ್ನು ಹೇಗೆ ಆಚರಿಸಬೇಕೆಂದು ತ್ಯಾಗರಾಜರೇ **'ತೆಲಿಸಿ ರಾಮಚಿಂತನತೋ'** ಕೀರ್ತನೆಯಲ್ಲಿ ಹೇಳುತ್ತಾರೆ: ಅರೆನಿಮಿಷವಾದರೂ ಇಂದ್ರಿಯಗಳ ಬಾಗಿಲನ್ನು ಮುಚ್ಚಿ ಶ್ರೀರಾಮನ ನಾಮದ ಮಹಿಮೆಯನ್ನು ಅರ್ಥಮಾಡಿಕೊಂಡು ಅವನನ್ನು ಕೀರ್ತಿಸು. ಅದು ಬರಿಯ ಯಾಂತ್ರಿಕಕ್ರಿಯೆಯಾಗದೆ, ಸತ್ತ್ವಪೂರ್ಣವಾಗಿ ಭಕ್ತಿಪೂರ್ಣವಾಗಿ ಇರಬೇಕು. ಇಂತಹ ಕೀರ್ತನೆಯಿಂದ ಚಿತ್ತ ಕ್ಷೋಭೆ ಕಳೆದು ತಾರಕರೂಪದ ತತ್ತ್ವಾರ್ಥವು ತಿಳಿಯುತ್ತದೆ.

ಸತತವೂ ತನ್ನಲ್ಲಿ ಅಂತರ್ಯಾಮಿಯಾಗಿರುವ ರಾಮನನ್ನು **'ವೈದೇಹಿಭಾಗ್ಯವೇ ದೇಹಿದೇಹಿ'** ಎನ್ನುತ್ತಾ ಭಜಿಸಬೇಕು. **'ಚಿಂತಸ್ತುನ್ನಾಡೇ ಯಮುಡು'** – ಭಕ್ತರು ಭಜನಾಸಕ್ತರಾಗಿರುವುದನ್ನು ಕಂಡು ಯಮನೇ ಚಿಂತೆಗೀಡಾಗಿದ್ದಾನೆ ಎಂದು ಹರಿಕೀರ್ತನೆಯ ಪ್ರಭಾವವನ್ನು ತ್ಯಾಗರಾಜರು ಸ್ವಾರಸ್ಯವಾಗಿ ಹೇಳಿದ್ದಾರೆ. ಹೀಗೆ ಜಾತಿ, ಕುಲ, ಬಡವ, ಬಲ್ಲಿದ ಎಂಬ ಭೇದಭಾವವಿಲ್ಲದೆ ಎಲ್ಲರೂ ಸೇರಿ ಎಲ್ಲ ಕಾಲದಲ್ಲಿಯೂ ಮಾಡಬಹುದಾದ ಕೀರ್ತನೆಯು ಪ್ರಶಸ್ತವಾದುದು. ಇಂತಹ ಒಂದು ಸಂಕೀರ್ತನೆಯ ಮತ್ತೊಂದು ರೂಪವಾದ ಹರಿಕಥಾ ಕಾಲಕ್ಷೇಪದಿಂದ ಕೀರ್ತನಕಾರರು ಭಗವತ್ಸಂಬಂಧಿತವಾದ ಯಾವುದಾದರೂ ಕಥಾಭಾಗಗಳನ್ನು ಆಯ್ದುಕೊಂಡು ಗದ್ಯ, ಪದ್ಯ, ಶ್ಲೋಕ, ಸಂಭಾಷಣೆ, ಅಭಿನಯ, ಉಪಕಥೆಗಳ ಮೂಲಕ ಭಾಗವತ ಧರ್ಮವನ್ನು ಎತ್ತಿಹಿಡಿದು ಭಕ್ತರಿಗೆ ಮಹದುಪಕಾರ ಮಾಡಿದ್ದಾರೆ.

### ೩. ಸ್ಮರಣಭಕ್ತಿ :



ಸದಾಕಾಲದಲ್ಲೂ ಭಗವಂತನನ್ನು ಸ್ಮರಿಸುವುದು, ಅವನ ಲೀಲೆಗಳನ್ನು ಮಂಗಳ ಗುಣಗಳನ್ನು ಸ್ಮರಿಸುವುದು, ಜಪ ಮಾಡುವುದು, ನಾಮಸ್ಮರಣೆ ಸ್ತೋತ್ರಾದಿಗಳಿಂದ ಸ್ಮರಿಸುವುದು, ಭಗವತ್ತತ್ತ್ವ ಚಿಂತನೆ ಮಾಡುವುದು ಇವೇ ಮುಂತಾದುವು ಸ್ಮರಣಭಕ್ತಿಯ ಲಕ್ಷಣಗಳು. ಇಂತಹ ಭಗವತ್ಸ್ಮರಣೆ ನಮ್ಮ ವಿಸ್ಮೃತಿಯನ್ನು ಹೋಗಲಾಡಿಸಿ ಭಗವತ್ಪ್ರಾಪ್ತಿಗೆ ಸಾಧನವಾಗುತ್ತದೆ ಎಂದು ಸದಾಶಿವಬ್ರಹ್ಮೇಂದ್ರರು ಹೇಳುತ್ತಾರೆ.

ಸಮರ್ಥ ರಾಮದಾಸರು **"ಸ್ಮರಣ ದೇವಾಚೇ ಕರಾವೇ... ಪ್ರಾತಃಕಾಳೀ, ಮಾಧ್ಯಾಹ್ನಕಾಳೀ, ಸಾಯಂಕಾಳೀ, ಸರ್ವಕಾಳೀ, ಹರ್ಷಕಾಳೀ, ವಿಷಮಕಾಳೀ, ಪರ್ವಕಾಳೀ, ಪ್ರಸ್ತಾವಕಾಳೀ, ವಿಶ್ರಾಂತಿಕಾಳೀ ನಿದ್ರಾಕಾಳೀ... ನಾಮಸ್ಮರಣ ಕರಾವೇ"** ಎಂಬುದಾಗಿ ಸರ್ವಕಾಲದಲ್ಲೂ ಸರ್ವಾವಸ್ಥೆಗಳಲ್ಲೂ ಸ್ಮರಣೆ ಮಾಡುತ್ತಿರಬೇಕು ಎಂದು ಹೇಳುತ್ತಾ **"ಕರಸೇ ಕಾಮ ಕರೋ ಮನಸೇ ಧ್ಯಾನ ಧರೋ"** ಎನ್ನುವಂತೆ ಸತತ ಭಗವನ್ನಾಮ ಸ್ಮರಣೆ ಮಾಡುತ್ತಲೇ ಎಲ್ಲ ಕೆಲಸಗಳನ್ನು ಮಾಡುತ್ತಿರಬೇಕು. ಅಖಂಡವಾಗಿ ನಡೆಯುತ್ತಿರುವ ಶ್ವಾಸೋಚ್ಛ್ವಾಸದೊಂದಿಗೆ ನಾಮಸ್ಮರಣ ಸಾಗುತ್ತಿರಬೇಕು. ಸಂಪತ್ತು ಇದ್ದಾಗಲೂ ವಿಪತ್ತು ಒದಗಿದಾಗಲೂ ನಾಮಸ್ಮರಣೆಯಲ್ಲಿ ಚ್ಯುತಿಯಾಗಬಾರದು. ಬಾಲ್ಯ, ತಾರುಣ್ಯ, ಮುಪ್ಪು ಹಾಗೂ ಅಂತ್ಯಕಾಲದಲ್ಲಿಯೂ ನಾಮಸ್ಮರಣೆ ನಿಲ್ಲಬಾರದು. ಆದ್ದರಿಂದ **"ವಾಟೇ ಹಳು ಹಳು ಚಲಾ। ವಾಚೇ ವಿಠಲ ವಿಠಲ ಬೋಲಾ"** ಎಂದರೆ "ದಾರಿಯಲ್ಲಿ ಸಾವಕಾಶವಾಗಿ ನಡೆಯಿರಿ. ಮಾತಿನಲ್ಲಿ ವಿಠಲ ವಿಠಲ ಎನ್ನಿರಿ. ಕಾರಣ ನಾಮಸ್ಮರಣೆಯೊಂದೇ ಭವತರಣಕ್ಕೆ ಉಪಾಯ" ಎನ್ನುತ್ತಾರೆ ಸಮರ್ಥರು. ಪುರಂದರದಾಸರ 'ನಾರಾಯಣ ಎನಬಾರದೆ' ಹಾಗೂ 'ಹರಿಯ ನೆನೆಸಿದ ದಿವಸ ಶುಭಮಂಗಳ' ಎಂಬ ಹಾಡುಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ.

ತ್ಯಾಗರಾಜರು ತಮ್ಮ ಅನೇಕ ಕೃತಿಗಳಲ್ಲಿ ಸ್ಮರಣಭಕ್ತಿಯ ಶಕ್ತಿಯನ್ನು ವರ್ಣಿಸಿದ್ದಾರೆ. ಶ್ರವಣಭಕ್ತಿ ಮತ್ತು ಕೀರ್ತನಭಕ್ತಿಯ ಮೂಲಕ ಸಂಗ್ರಹಿಸಿದ ದೇವರ ನಾಮರೂಪಗಳನ್ನು ಮನಸ್ಸಿನಲ್ಲಿ ಸತತವಾಗಿ ನೆನೆಯುವುದೇ ಸ್ಮರಣಭಕ್ತಿ. ವಿಷ್ಣುವಿನ ಸ್ಮರಣೆಯೇ ಸಂಪತ್ತು. ಅವನನ್ನು ಮರೆಯುವುದು ವಿಪತ್ತು. ಭಗವಂತನ ಸ್ಮರಣೆ ಆನಂದದಾಯಕವಾದುದು. ಈ ಧ್ಯಾನ ಯಾಂತ್ರಿಕ ಕ್ರಿಯೆಯಾಗದೆ ಭಗವದ್ಭಕ್ತಿ ಹಾಗೂ ಪ್ರೇಮದಿಂದ ತುಂಬಿ ನಮ್ಮನ್ನು ಪುಳಕಿತರನ್ನಾಗಿ ಮಾಡಬೇಕು. ಇಂತಹ ಧ್ಯಾನವನ್ನು ತ್ಯಾಗರಾಜರು 'ವೃತ್ತಿ' ಎಂದು ಕರೆಯುತ್ತಾ **"ಚಂಡ ಶತ್ರುಘ್ನಡಪ್ಪುಡು"** ಎಂಬ ಕೀರ್ತನೆಯಲ್ಲಿ ಶತ್ರುಘ್ನನ 'ವೃತ್ತಿ' ಎಂದರೆ ಅವನ ಮನದಲ್ಲಿ ಏಳುವ ಆಲೋಚನಾ ತರಂಗಗಳು ಪರಬ್ರಹ್ಮನ ಸಾಕಾರರೂಪನಾಗಿದ್ದ ಶ್ರೀರಾಮನನ್ನೇ ಕುರಿತಾದದ್ದು ಎನ್ನುತ್ತಾರೆ. ಇಂತಹ ಭಕ್ತಿಗೆ ಭಗವಂತನನ್ನೇ ಸಂತಸಪಡಿಸಬಲ್ಲ ಶಕ್ತಿ ಇದೆ ಎಂದು ಹೇಳುತ್ತಾ **"ಶ್ರೀಪತೇ ನೀ ಪದಚಿಂತನ ಜೀವನಮು"** ನಿನ್ನ ದಿವ್ಯ ಪಾದಗಳನ್ನು ಧ್ಯಾನಿಸುವುದೇ ಜೀವನ ಎನ್ನುತ್ತಾರೆ. **'ಸ್ಮರಣೇಸುಖಮು'** ಎಂಬ ತಮ್ಮ ಇನ್ನೊಂದು ಕೃತಿಯಲ್ಲಿ ತ್ಯಾಗರಾಜರು ನಿರಂತರ ರಾಮನಾಮಸ್ಮರಣೆಯು ಆ ಭಗವಂತನ ದಿವ್ಯರೂಪವನ್ನು ಹೃದಯದಲ್ಲಿ ನಿಲ್ಲಿಸಿ ದಿವ್ಯಭಕ್ತಿಯನ್ನು ನೆಲೆಗೊಳಿಸುವುದು ಎನ್ನುತ್ತಾರೆ. ತಮ್ಮ ಮತ್ತೊಂದು ಕೃತಿಯಲ್ಲಿ **'ಧ್ಯಾನಮೇ ವರಮೈನ ಗಂಗಾಸ್ನಾನಮೇ'** ಎಂಬುದಾಗಿ ಧ್ಯಾನವನ್ನು ಗಂಗಾಸ್ನಾನಕ್ಕೆ ಹೋಲಿಸುತ್ತಾರೆ. ಭಗವಂತನ ಧ್ಯಾನದಿಂದ ಮನಸ್ಸು ನಿರ್ಮಲವಾಗುವುದು. ದಶರಥಕುಮಾರನನ್ನು ದಹರಾಕಾಶದಲ್ಲಿ ಸ್ಥಾಪಿಸಿ ಆತನಲ್ಲೇ ಮನಸ್ಸು ನಿಲ್ಲಿಸಿ ಬ್ರಹ್ಮಾನಂದವನ್ನು ಹೊಂದುವುದಕ್ಕಿಂತ ಮಿಗಿಲಾದ ಭಾಗ್ಯ ವುಂಟೇ ಎಂದು ಕೇಳುತ್ತಾರೆ.

ಹೀಗೆ ಅನುದಿನವೂ ಅನವರತವೂ ಅಂತರ್ಯದಲ್ಲೇ ಆ ದಯಾಳುವಾದ ದೇವದೇವನನ್ನು ಕಂಡುದರಿಂದ ಅವರಿಗಾದ ಆನಂದ ಹೀಗಿದೆ: **'ಅನುದಿನಮನು ನನು ಮನಸುನ ಕನುಗೊನಿ ಆನಂದವಾಯೇ ದಯಾಳೋ'** ಇದು ಸ್ಮರಣಭಕ್ತಿಯ ಫಲ. ತ್ಯಾಗರಾಜರ ದೃಷ್ಟಿಯಲ್ಲಿ ನಿಜವಾದ ಭಕ್ತರೆಲ್ಲರೂ ಸ್ಮರಣಭಕ್ತಿಯಿಂದ ಸಿರಿವಂತರಾದವರು. **'ನಿಧಿ ಚಾಲ ಸುಖಮಾ? ರಾಮುನಿ ಸನ್ನಿಧಿ ಸೇವಾ ಸುಖಮಾ?'** ಎಂಬ ಕೀರ್ತನೆ ಇದಕ್ಕೆ ನಿದರ್ಶನ.

(ಮುಂದುವರಿಯುವುದು)

❋❋❋